★★★

ಇವತ್ತು ಬೆಳಿಗ್ಗೆಯಿಂದ ಒಂದೇ ಸವನೆ ಸುರಿದ ಮಳೆ ಮಧ್ಯಾಹ್ನದ ಹೊತ್ತಿಗೆ ಸ್ವಲ್ಪ ಹೊಳವಾಗಿತ್ತು. ಮುರುಕಲು ಮರದ ಸಂಕವನ್ನು ದಾಟಿ ಪೇಟೆಗೆ ಹೋಗಿ ಹೆಗ್ಡೇರ ಅಂಗಡಿಯಲ್ಲಿ ಮುಂದಿನ ತಿಂಗಳು ತೆಂಗಿನ ಕೊಯ್ಲಿಗೆ ಖಂಡಿತ ಕೊಡುತ್ತೇನೆಂದು ಹೇಳಿ ಒಂದಿಷ್ಟು ಉಪ್ಪು, ಬೇಳೆ, ಬೆಲ್ಲ ತೆಗೆದುಕೊಂಡು ಮಳೆ ಪುನಹ ಪ್ರಾರಂಭವಾಗುವುದರೊಳಗೆ ಮನೆ ತಲುಪುತ್ತೇನೆಂದು ಓಡೋಡಿ ಬಂದಿದ್ದಳು. ಮನೆಗೆ ಬಂದರೆ ಆಗಲೇ ಶಾಲೆಯಿಂದ ಬಂದ ಮಕ್ಕಳಲ್ಲಿ ಚಿಕ್ಕವನು ಶಾಲೆಯ ಚೀಲವನ್ನು ಚಾವಡಿಯ ಮೂಲೆಯಲ್ಲಿ ಎಸೆದು ಚಾಪೆ ಬಿಡಿಸಿಕೊಂಡು ಮಲಗಿದ್ದ. ದೊಡ್ಡವನು ಏನೇನೋ ಉಪಚಾರ ಮಾಡುತ್ತಿದ್ದ. ತಾಯಿಯನ್ನು ನೋಡಿದ್ದೇ, 'ಅಮ್ಮ ಸಣ್ಣನಿಗೆ ವಿಪರೀತ ಜ್ವರ' ಎಂದಿದ್ದ. ಈಕೆ ಮುಟ್ಟಿನೋಡಿದರೆ ಕೈ ಸುಡುವಂತಿತ್ತು. ಮನೆಯಲ್ಲಿದ್ದ ಮೆಣಸಿನ ಕಾಳು ಶುಂಠಿಗೆ ಈಗ ತಾನೇ ಅಂಗಡಿಯಿಂದ ತಂದ ಬೆಲ್ಲ ಸೇರಿಸಿ ಕಷಾಯ ಮಾಡಿ ಕೊಟ್ಟಿದ್ದಳು. ರಾತ್ರಿ ಊಟಕ್ಕೆ ಏನಾದರೂ ಮಾಡಬೇಕಲ್ಲ ಎಂದು ಅತ್ತಿತ್ತ ಹುಡುಕಾಡುವ ವೇಳೆ ಮತ್ತೆ ಮಳೆ ಪ್ರಾರಂಭವಾಗಿತ್ತು. ಪ್ರಾರಂಭವಾಗಿದ್ದೇ ಧೋ ಎಂದು ಸುರಿಯಲಿಕ್ಕೇ ಹತ್ತಿತ್ತು. ಮಾಣಿಗೆ ಕಷಾಯ ಕೊಟ್ಟಿದ್ದೇನೋ ಹೌದು. ಎಲ್ಲಿಯಾದರೂ ಅದರಲ್ಲಿ ಗುಣವಾಗದೆ ಬೇರೇನಾದರೂ ತರಬೇಕೆಂದರೆ ಹೊರಹೋಗುವ ಹಾಗಿಲ್ಲ. ಅದೇ ಚಿಂತೆಯಲ್ಲೆ ಒಲೆ ಉರಿಸುತ್ತ ಇದ್ದಾಗ ಬಾಗಿಲು ತೆಗೆದು ಯಾರೋ ಒಳಬಂದಂತೆ ಅನಿಸಿತು. ಅಡಿಗೆ ಮನೆಯ ಬಾಗಿಲ ಮೂಲಕ ಇಣುಕಿದರೆ ಯಾರೆಂದು ಕಾಣಿಸಲಿಲ್ಲ. ಹೊರಬಂದು ಚಿಮಿಣಿಯನ್ನು ದೊಡ್ಡದು ಮಾಡಿ ನೋಡಿದರೆ ಮೌನವಾಗಿ ಒದ್ದೆ ಬಟ್ಟೆಯನ್ನು ಬಿಚ್ಚುತ್ತ ತಲೆ ಕೂದಲನ್ನು ಕೊಡವಿಕೊಳ್ಳುತ್ತಿದ್ದ ಪೂರ್ಣವಾಗಿ ತೋಯ್ದಿದ್ದ ಗಂಡನ ಸವಾರಿ. ಇದ್ದದ್ದರಲ್ಲಿಯೇ ಸಂಭ್ರಮಗೊಂಡ ವಾಗ್ದೇವಿ ಮೈ ಒರೆಸಿಕೊಳ್ಳಲು ಮತ್ತು ಸುತ್ತಿಕೊಳ್ಳಲು ಒಣ ಪಂಚೆಯೊಂದನ್ನು ಕೊಟ್ಟು ಅಡಿಗೆ ಮನೆಗೆ ಓಡಿದಳು ಅನ್ನಕ್ಕೆ ಅಕ್ಕಿ ಜಾಸ್ತಿ ಹಾಕಲು.

ಮಾಣಿಯ ಜ್ವರ ಕಡಿಮೆಯಾಗಿರಲಿಲ್ಲ. ಇನ್ನೊಂದು ಸಲ ಕಷಾಯ ಕುಡಿಸಿ ಮಲಗಿಸಿ ಗಂಡನಿಗೆ ಊಟ ಹಾಕಿ ತಾನೂ ಊಟಮಾಡಿದಳು. ದೊಡ್ಡ ಮಗ ಯಾವಾಗಲೋ ಊಟ ಮಾಡಿ ಚಿಮಿಣಿ ದೀಪದ ಬೆಳಕಿನಲ್ಲಿ ಒಂದಿಷ್ಟು ಓದುವ ಶಾಸ್ತ್ರ ಮಾಡಿ ಮಲಗಿ ಆಗಿತ್ತು. ಈಕೆ ಮುಸುರೆ ಪಾತ್ರೆ ಸೇರಿಸಿ ಬರುವಾಗ ಗಂಡನ ಸವಾರಿ ಚಾವಡಿ ಕಂಬಕ್ಕೆ ಒರಗಿ ತನ್ನ ಮಾಮೂಲಿ ಸೇವೆಯನ್ನು ಪ್ರಾರಂಭಿಸಿದ್ದರು. ಎಂದೂ ಇಲ್ಲದವಳು ವಾಗ್ದೇವಿ ಅವರ ಎದುರಿಗೆ ಬಂದು ಕುಳಿತಳು. ಗಂಡನಿಗೆ ಆಶ್ಚರ್ಯವಾಯ್ತೇ ಎಂದು ನೋಡಲೂ ಆ ಬೆಳಕಿನಲ್ಲಿ ಸಾಧ್ಯವಾಗಲಿಲ್ಲ. ಮಾತಾಡಲಿಕ್ಕೆ ಶುರುಮಾಡಿದಳು. ಮದುವೆಯಾದಂದಿನಿಂದ ಯಾವತ್ತೂ ಹೀಗೆ ಕುಳಿತು ಗಂಡನೊಡನೆ ಮಾತಾಡಿದವಳಲ್ಲ ಅವಳು. ಭೂಸುಧಾರಣೆಯ ಕಾನೂನು ಜಾರಿ ಬಂದು ಮಾವ ಸತ್ತಂದಿನಿಂದ ಇವತ್ತಿನ ವರೆಗೆ ಆದ ತೊಂದರೆಗಳ ಬಗ್ಗೆ ಸೂಕ್ಷ್ಮವಾಗಿ ಹೇಳಿದಳು. ಮಕ್ಕಳನ್ನು ಶಾಲೆಗೆ ಕಳುಹಿಸುವಾಗಿನ ಕಷ್ಟವನ್ನೂ ಹೇಳಿ ಇವತ್ತು ಜ್ವರದಿಂದ ಮಲಗಿದ ಸಣ್ಣ ಮಾಣಿಯನ್ನು ತೋರಿಸಿದಳು. ಗೋಡೆಯ ಮೂಲೆಯಲ್ಲಿ ಬಟ್ಟೆಯನ್ನು ಸುತ್ತಿಕೊಂಡು ಮಲಗಿದ್ದ ಮಾಣಿಯತ್ತ ಒಂದು ನೋಟವನ್ನು ಹರಿಸಿದರಷ್ಟೆ. ಈಕೆ ಹೇಳುವುದನ್ನೆಲ್ಲ ಹೇಳಿ ಕೊನೆಯಲ್ಲಿ, 'ಈ ಮಳೆಗಾಲದಲ್ಲಾದರೂ ತೋಟದ ದಂಡೆಯನ್ನು ಬಲಪಡಿಸದಿದ್ದರೆ ಈಗ ಜೀವನಕ್ಕಿರುವ ಒಂದೇ ದಾರಿಯಾದ ಆ ತೋಟವೂ ಮುಂದೆ ಇರಲಾರದು. ಅದಕ್ಕೆ ನೀವೇ ಏನಾದರೂ ಮಾಡಿದರೆ ಒಳ್ಳೆಯದು' ಎಂದು ಸೇರಿಸಿ ಮಲಗಲಿಕ್ಕೆ ಹೋದಳು. ಗಂಡ ಮಲಗಲಿಕ್ಕೆ ಹೋಗುವಾಗ